b) 336.7 Hectares (832.00 acres).

c) Rs. 32.50 lakhs. Administrative approval giveen on 6-11-1990.

d) The work is started from 1-3-1991.

ಮಿನಿ ಸ್ಟೇಡಿಯಂ ನಿರ್ಮಿಸುವ ಬಗ್ಗೆ.

1333 – ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ), ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ನಗರದಲ್ಲಿ ಮಿನಿ ಸ್ಟೇಡಿಯಂ ಇದೆಯೇ?*

ಆ) *ಇಲ್ಲದಿದ್ದಲ್ಲಿ ನಗರದಲ್ಲಿ ಮಿನಿ ಸ್ಟೇಡಿಯಂ ನಿರ್ಮಿಸಬೇಕೆಂದು ಕೋರಿ ಹಳಿಯಾಳ ನಗರದಲ್ಲಿರುವ ಬ್ಲಾಕ್ ನಂ. 13ರಲ್ಲಿ ಸಣ್ಣ ಕ್ರೀಡಾಂಗಣವನ್ನು ನಿರ್ಮಿಸುವಷ್ಟು ಜಾಗವನ್ನು ಅಲ್ಲಿಯ ಯುವಕ ಮಂಡಲದವರು ಜಿಲ್ಲಾ ಯುವಜನ ಇಲಾಖೆಗೆ ಕೊಟ್ಟಿರುವುದು ನಿಜವೇ?*

ಇ) *ಹಾಗಿದ್ದಲ್ಲಿ ಸರ್ಕಾರವು ಹಳಿಯಾಳ ನಗರದಲ್ಲಿ ಆದಷ್ಟು ಬೇಗ ಮಿನಿ ಸ್ಟೇಡಿಯಂ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವುದೇ?*

ಶ್ರೀ ಎಸ್. ರಮೇಶ್, (ಯುವಜನ ಸೇವಾ ಮತ್ತು ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಕ್ರೀಡಾ ಪಟುಗಳಿಗೆ ಸರಿಯಾದ ಸೌಲಭ್ಯ ಕಲ್ಪಿಸುವ ಬಗ್ಗೆ.

1334 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ), ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಪರಿಸ್ಥಿತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿರುವ ಕ್ರೀಡಾ ನಿಲಯಕ್ಕೆ 1988-89, 89-90 ಮತ್ತು 1990-91ನೇ ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಲಾಗಿರುವ ಹಣದ ಪ್ರಮಾಣವೆಷ್ಟು;*

ಆ) *ಈಗ ಈ ಕ್ರೀಡಾ ವಿದ್ಯಾರ್ಥಿನಿಲಯದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?*

ಇ) *ಈ ಕ್ರೀಡಾ ವಿದ್ಯಾರ್ಥಿಗಳಿಗೆ ಊಟ ಉಪಹಾರದ ವ್ಯವಸ್ಥೆ ಸರಿಯಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಈ) *ಈ ಕ್ರೀಡಾ ವಿದ್ಯಾರ್ಥಿನಿಲಯದ ಕಟ್ಟಡ ಹಾಳಾಗಿದ್ದು ಇಲ್ಲಿನ ನೈರ್ಮಲ್ಯ ವ್ಯವಸ್ಥೆ ಹದಗೆಟ್ಟಿರುವುದು ನಿಜವಲ್ಲವೇ?*

ಉ) *ಹಾಗಿದ್ದಲ್ಲಿ, ಮೇಲ್ಕಂಡ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?*

ಊ) *ಈ ಕ್ರೀಡಾ ವಿದ್ಯಾರ್ಥಿನಿಲಯದ ಈ ಬೃಹತ್ ಸಮಸ್ಯೆಗಳಿಗೆ ಕಾರಣರಾದವರ ಮೇಲೆ ಸರ್ಕಾರದವರು ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳುವರೇ?*

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ ಸಚಿವರು)

ಅ) ಈ ಕೆಳಗಿನಂತೆ ಹಣವನ್ನು ಮಂಜೂರು ಮಾಡಲಾಗಿದೆ.

1988-89	ರೂ. 2,66,040-00
1989-90	ರೂ. 4,68,780-00
1990-91	ರೂ. 3,60.310-00

ಆ) 93 ವಿದ್ಯಾರ್ಥಿಗಳು.

ಇ) ಹೌದು

ಈ) ಈ ವಿಷಯದಲ್ಲಿ ತುರ್ತು ಕ್ರಮ ತೆಗೆದುಕೊಳ್ಳಲು ಈಗಾಗಲೇ ಲೋಕೋಪಯೋಗಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಇಂದನ ಇಲಾಖೆಗಳನ್ನೊಳಗೊಂಡ ಅಧಿಕಾರಿಗಳ ಸಮಿತಿಯನ್ನು ರಚಿಸಿದೆ. ಸಮಿತಿಯ ತೀರ್ಮಾನದ ಪ್ರಕಾರ ಕ್ರೀಡಾನಿಲಯ, ಕ್ರೀಡಾ ವಿಭಾಗದ ಕಟ್ಟಡ ದುರಸ್ತಿ ಕಾರ್ಯವನ್ನು ಅಡಿಗೆ ಮನೆ ಮತ್ತು ಶೌಚಾಲಯಗಳ ಮತ್ತು ನೀರಿನ ಸುವ್ಯವಸ್ಥೆಗಾಗಿ ಕ್ರಮತೆಗೆದುಕೊಳ್ಳಲಾಗುತ್ತಿದೆ.

ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಕೋಮು ಗಲಭೆಗಳ ಬಗ್ಗೆ.

1336 – ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ), ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ ಇತ್ತೀಚೆಗೆ (ಫೆ:1 1991ರಂದು) ಸಂಭವಿಸಿದ ಕೋಮು ಗಲಭೆಗಳಿಗೆ ಕಾರಣಗಳೇನು;

ಆ) ಈ ಗಲಭೆಯ ಸಂಬಂಧವಾಗಿ ಸರ್ಕಾರ ಇದುವರೆಗೆ ಎಷ್ಟು ಜನರನ್ನು ಬಂಧಿಸಿ ಕ್ರಮ ಕೈಗೊಂಡಿದೆ.

ಇ) ಈ ಸಮಯದಲ್ಲಿ ಉಂಟಾದ ಸಾರ್ವಜನಿಕ ಆಸ್ತಿ-ಪಾಸ್ತಿಗಳ ನಷ್ಟದ ಅಂದಾಜು ಎಷ್ಟು;

ಈ) ಸರ್ಕಾರ ಪರಿಹಾರವನ್ನೇನಾದರೂ ಬಿಡುಗಡೆ ಮಾಡಿದೆಯೇ;

ಉ) ಮಾಡಿದ್ದರೆ ಎಷ್ಟು ಮೊತ್ತದ ಪರಿಹಾರವನ್ನು ಬಿಡುಗಡೆ ಮಾಡಿದೆ;

ಊ) ಈ ಗಲಭೆಗೆ ಕಾರಣವನ್ನು ತಿಳಿಯಲು ಸರ್ಕಾರ ಯಾವ ಮಟ್ಟದಲ್ಲಿ ತನಿಖೆಗೆ ವ್ಯವಸ್ಥೆ ಮಾಡಿದೆ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು)

ಅ) ದಿನಾಂಕ: 31-1-1991 ರಂದು ರಾತ್ರಿ ಪೇಜಾವರ ಮಠಕ್ಕೆ ಸೇರಿದ ಒಂದು ಟೆಂಪೋಗೆ ಸುಳ್ಯದ ಹೊರ ವಲಯದಲ್ಲಿ ಯಾರೋ ಕಿಡಿಗೇಡಿಗಳು ಕಲ್ಲು ತೂರಿದ್ದರಿಂದ, ಸದರಿ ಟೆಂಪೋದ ಗಾಜುಗಳು ಒಡೆದಿದ್ದು, ಈ ಘಟನೆಯನ್ನು ಖಂಡಿಸಲು ದಿನಾಂಕ: 1-2-1991 ರಂದು ಒಂದು ಪ್ರತಿಭಟನಾ ಮೆರವಣಿಗೆಯನ್ನು ಒಯ್ಯುವಾಗ ಎರಡು ಗುಂಪಿನವರು ಪರಸ್ಪರ ಕಲ್ಲು ತೂರಿದ್ದುದು ಸುಳ್ಯದ ಕೋಮು ಗಲಭೆಗೆ ಕಾರಣವಾಗಿರುತ್ತದೆ.

ಆ) 113 ಜನರನ್ನು ಬಂಧಿಸಿ, 170 ಮೊಕದ್ದಮೆಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

ಇ) ರೂ.1,30,04,495-00

ಈ) ಹೌದು

ಉ) ರೂ.28 ಲಕ್ಷ.

ಊ) ಸಿ.ಓ.ಡಿ.ಯ ಐ.ಜಿ.ಪಿ.ಯವರಿಂದ ತನಿಖೆ ನಡೆಸಲು ಆದೇಶಿಸಲಾಗಿದೆ.